**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

KARNATAKA SAMSKRIT UNIVERSITY

**कर्नाटक-संस्कृत-विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೦೩.೦೩.೨೦೧೪ರಂದು ನಡೆದ ಪ್ರಶಾಸನ ಸಮಿತಿ ೨೦ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೨೦ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ ೦೩, ೨೦೧೪ರ ಸೋಮವಾರ ಅಪರಾಹ್ನ ೩.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಶ್ರೀ ಬಿ.ಟಿ. ಮುನಿರಾಜಯ್ಯ,** ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಶ್ರೀ ಬಿ.ಎ. ರಾಜಶೇಖರ್,** ಸಹನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೫. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೬. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೭. | **ಪ್ರೊ. ಶ್ರೀನಿವಾಸ ವರಖೇಡಿ,** ಡೀನ್, ಶಾಸ್ತ್ರ ನಿಕಾಯ, ಕಸಂವಿ | ಸದಸ್ಯರು |
| ೮. | **ಪ್ರೊ. ವಿ. ಗಿರೀಶ್‌ಚಂದ್ರ,** ಡೀನ್, ಭಾಷಾ ನಿಕಾಯ, ಕಸಂವಿ | ಸದಸ್ಯರು |
| ೯. | **ವಿದ್ವಾನ್ ಪಿ.ಆರ್. ಪಾಗೋಜಿ,** ಉಪ ಕುಲಸಚಿವರು | ಪ್ರತ್ಯಾಯೋಜಿತ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಜಂಟಿ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೬. | **ಆಯುಕ್ತರು,** ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೭. | **ನಿರ್ದೇಶಕರು,** ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೮. | **ನಿರ್ದೇಶಕರು,** ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೯. | **ನಿರ್ದೇಶಕರು,** ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹತ್ತೊಂಭತ್ತನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 18.02.2014ರಂದು ನಡೆದ ಪ್ರಶಾಸನ ಸಮಿತಿ ಹತ್ತೊಂಭತ್ತನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ಅಧ್ಯಕ್ಷರ ಅಪ್ಪಣೆ ಮೇರೆಗೆ** ಚರ್ಚಿತವಾದ **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ಘನತೆವೆತ್ತ ರಾಜ್ಯಪಾಲರು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ವರದಿಯನ್ನು ಕಳುಹಿಸಿಕೊಡಲು ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಯುಜಿಸಿ ವೇತನಶ್ರೇಣಿಯ ಬೋಧಕ ಪ್ರಾಧ್ಯಾಪಕ ಮತ್ತು ಸಹಾಯಕ ಪ್ರಾಧ್ಯಾಪಕ ಸಿಬ್ಬಂದಿಗಳಿಗೆ ಪರೀಕ್ಷಣಾ ಅವಧಿಯನ್ನು ಒಂದು ವರ್ಷಕ್ಕೆ ನಿಗದಿಪಡಿಸಿ ಆದೇಶ ನೀಡಲು ಕ್ರಮವಹಿಸಲಾಗಿದೆ. ವಿದ್ಯಾರ್ಥಿವೇತನ ನೀಡಲು ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಡಾ. ಪ್ರಭುಲಿಂಗ ಹೆಬ್ಬಾಳ ಅವರ ವಿರುದ್ಧ ರಾಜ್ಯ ಮಹಿಳಾ ಆಯೋಗದಲ್ಲಿ ದೂರು ದಾಖಲಿಸಲು ಹಾಗೂ ಪ್ರಶಾಸನ ಸಮಿತಿ ಸಭೆಗೆ ಹಾಜರಾಗುವಂತೆ ತಿಳಿಸಲು ಕ್ರಮವಹಿಸಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

**ವಿಷಯ 2: ವೇದ ವಿಜ್ಞಾನ ಶೋಧ ಸಂಸ್ಥಾನಕ್ಕೆ 'ಸಂಶೋಧನಾ ಕೇಂದ್ರ'ದ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಸಂಶೋಧನಾ ಕೇಂದ್ರ'ದ ಮಾನ್ಯತೆ ನೀಡುವಂತೆ ಜನಸೇವಾ ವಿಶ್ವಸ್ತ ಮಂಡಳಿಯ ಅಂಗಸಂಸ್ಥೆಯಾದ ವೇದವಿಜ್ಞಾನ ಶೋಧಸಂಸ್ಥಾನ, ಮಾಗಡಿ ರಸ್ತೆ, ಚನ್ನೇನಹಳ್ಳಿ, ಬೆಂಗಳೂರು –ಈ ಸಂಸ್ಥೆಯವರು ಮನವಿ

ಮಾಡಿದ್ದರು. ಅವರ ಮನವಿ ಮೇರೆಗೆ ವಿಶ್ವವಿದ್ಯಾಲಯವು ತಜ್ಞರ ಸಮಿತಿಯೊಂದನ್ನು ನೇಮಿಸಿತ್ತು. ಈ ಸಮಿತಿಯು ದಿನಾಂಕ: 30.01.2014ರಂದು ವೇದವಿಜ್ಞಾನ ಶೋಧಸಂಸ್ಥಾನಕ್ಕೆ ಭೇಟಿ ನೀಡಿ ಪರಿಶೀಲನೆಯನ್ನು ನಡೆಸಿದ್ದು, ವಿಸ್ತೃತ ಪರಿಶೀಲನಾ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ. ತಜ್ಞ ಸಮಿತಿಯ ಶಿಫಾರಸ್ಸಿನನ್ವಯ ಈ ಸಂಸ್ಥೆಗೆ 'ಸಂಶೋಧನಾ ಕೇಂದ್ರ'ದ ಮಾನ್ಯತೆ ನೀಡಲಾಗಿದ್ದು, ಪ್ರಶಾಸನ ಸಮಿತಿಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಸಂಶೋಧನಾ ಕೇಂದ್ರದ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ವಿಷಯ 3: ಯುಜಿಸಿ ವೇತನಶ್ರೇಣಿಯ ಸಹ ಪ್ರಾಧ್ಯಾಪಕರ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 26.05.2013ರಂದು ನಡೆದ ಪ್ರಶಾಸನ ಸಮಿತಿ 14ನೇ ಸಭೆಯ ಅನುಮೋದನೆಯಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸೃಜಿಸಿರುವ **ಬೋಧಕ ಹುದ್ದೆ**ಗಳ ಪೈಕಿ ಯುಜಿಸಿ ವೇತನಶ್ರೇಣಿಯ 06 ಸಹ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ದಿನಾಂಕ: 30.05.2013ರಂದು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಸಹ ಪ್ರಾಧ್ಯಾಪಕ ಹುದ್ದೆಗೆ ಸಲ್ಲಿಸಿದ ಅಭ್ಯರ್ಥಿಗಳ ಅರ್ಜಿಗಳ ಪರಿಶೀಲನಕಾರ್ಯ ಮುಕ್ತಾಯಗೊಂಡಿದ್ದು, ಅರ್ಹ ಅಭ್ಯರ್ಥಿಗಳಿಗೆ ದಿನಾಂಕ 2014ರ ಫೆಬ್ರವರಿ 10 ಮತ್ತು 11ರಂದು ಮೂಲ ದಾಖಲೆಗಳ ಪರಿಶೀಲನೆ ಹಾಗೂ ಸಂದರ್ಶನವನ್ನು ನಡೆಸಲಾಯಿತು. ಈ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ವಯ ಬೋಧಕ ಹುದ್ದೆಗಳ ನೇಮಕಾತಿಯನ್ನು ಈ ಹಿಂದಿನ ಪ್ರಶಾಸನ ಸಮಿತಿ 19ನೇ (ವಿಶೇಷ) ಸಭೆಯಲ್ಲಿ ವಿಷಯದ ಅನುಮೋದನೆಯನ್ನು ಮಾಡಬೇಕಾಗಿತ್ತು. ಆದರೆ, ಸರ್ಕಾರದ ಪತ್ರ ಸಂಖ್ಯೆ: ಇಡಿ 51 ಪ್ರಕಾ 2014; ದಿನಾಂಕ: 17.02.2014ರ ಪತ್ರದಲ್ಲಿ ಸೂಚಿಸಿರುವಂತೆ ಮುಂದಿನ ಪ್ರಶಾಸನ ಸಮಿತಿ ಸಭೆಯಲ್ಲಿ ಇಟ್ಟುಕೊಳ್ಳಲು ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದ್ದರು. ಇಡಿ 34 ಯುಡಿವಿ 2013; ದಿನಾಂಕ: 31.05.2013ರ ಸುತ್ತೋಲೆಯಲ್ಲಿ ಕುಲಪತಿಗಳ ಅಧಿಕಾರಾವಧಿಯ ಕೊನೆಯ ಮೂರು ತಿಂಗಳ ಅವಧಿಯಲ್ಲಿ ಯಾವುದೇ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಬಾರದೆಂದು ಸೂಚಿಸಿದ್ದು, ಮಾನ್ಯ ಕುಲಪತಿಗಳ ಅಧಿಕಾರಾವಧಿ 25 ಮೇ 2014ರ ತತ್ಪೂರ್ವದಲ್ಲಿಯೇ ಯುಜಿಸಿ ವೇತನಶ್ರೇಣಿಯ ಸಹ ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆ ಸಂಪೂರ್ಣ ಮುಗಿದಿದ್ದು, ತಾಂತ್ರಿಕ ಕಾರಣಗಳಿಂದ ಮುಂದೂಡಲ್ಪಟ್ಟಿತ್ತು. ಬೋಧಕ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯ ಮುಂದೆ ಯುಜಿಸಿ ವೇತನಶ್ರೇಣಿಯ ಬೋಧಕ 'ಸಹ ಪ್ರಾಧ್ಯಾಪಕ' ಹುದ್ದೆಗಳಿಗೆ 2014ರ ಫೆಬ್ರವರಿ 11ರಂದು ನಡೆದ 'ಆಯ್ಕೆಸಮಿತಿ' ಸಭೆಯ ಶಿಫಾರಸ್ಸುಗಳನ್ನು ಮಾನ್ಯ ಕುಲಪತಿಗಳು ಮಂಡಿಸಿದರು. ಒಂದೊಂದು ನಿಕಾಯಗಳಿಗೆ ಯೋಜನೆ, ಸಂಶೋಧನೆ ಮತ್ತು ಬೋಧನೆ – ಇವುಗಳಿಗೆ ಅನುಗುಣವಾಗಿ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಹೊರಡಿಸಿದ ಅಧಿಸೂಚನೆಯ ಅನ್ವಯ ಹಾಗೂ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆಗೊಂಡ** 'Statute Governing the Appointment of Professor, Associate Professor, Assistant Professor and Librarians & conduct of Interview to Teaching, Academic Staff & Other Allied posts under section 38(II) of the Karnataka Samskrit University Act, 2009' (**ಸಂಖ್ಯೆ: ಇಡಿ 8 ಯುಡಿಎಸ್ 2012; ದಿನಾಂಕ: 20.03.2013**)ರ Sec. 7.1; 9.1; 10; 11; 12 & 16 **ಇವುಗಳಲ್ಲಿರುವ ಎಲ್ಲಾ ನಿಯಮಗಳನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಸಭೆಯು ಸಂಪೂರ್ಣವಾಗಿ ಎಲ್ಲ ವಿವರಗಳನ್ನು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಶೈಕ್ಷಣಿಕ ಅರ್ಹತೆ, ಸಂಶೋಧನ ಅನುಭವ ಹಾಗೂ ಇತರೆ ಅರ್ಹತೆಗಳನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆ ತನ್ನ ಅನುಮೋದನೆಯನ್ನು ನೀಡಿತು.**

| ಕ್ರಸಂ. | ನಿಕಾಯ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| **01.** | ವೇದಾಂತ ನಿಕಾಯ | **ಡಾ. ವೀರನಾರಾಯಣ ಎನ್.ಕೆ. ಪಾಂಡುರಂಗಿ**<br>80/413, ಪಟೇಲ್ ಮಾರ್ಗ<br>ಮಾನಸರೋವರ, ಜೈಪುರ – 302021, ರಾಜಸ್ತಾನ | ಸಾಮಾನ್ಯ |
| **02.** | ಶಾಸ್ತ್ರ ನಿಕಾಯ | **ಡಾ. ಬಿ.ವಿ. ವೆಂಕಟರಮಣ**<br># 106/110, ಅಶೋಕ ಮಾರ್ಗ, ವಿಜಯ ಪಥ, ಮಾನಸರೋವರ<br>ಜೈಪುರ – 302020, ರಾಜಸ್ತಾನ | ಸಾಮಾನ್ಯ |

**ವೇದಾಂತ ನಿಕಾಯಕ್ಕೆ ಆಯ್ಕೆ ಸಮಿತಿಯಿಂದ ಶಿಫಾರಸ್ಸುಗೊಂಡಿದ್ದ ಅಭ್ಯರ್ಥಿ ಡಾ. ಕೆ.ಎಸ್. ಸುಮನ್ ಅವರಿಗೆ ಸಂಬಂಧಿಸಿದಂತೆ ಶೈಕ್ಷಣಿಕ ವಿಷಯದಲ್ಲಿ ತಾಂತ್ರಿಕ ಸಮಸ್ಯೆಗಳು ಇರುವುದರಿಂದ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ಮುಂದಿನ ಪ್ರಶಾಸನ ಸಮಿತಿ ಸಭೆಯಲ್ಲಿ ಮಂಡಿಸಲು ಸಭೆ ಸೂಚಿಸಿತು. ಉಳಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ 1 –ಈ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ಇಲ್ಲದಿರುವ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ನಿಯಮಾನುಸಾರ ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು. ವೇದಾಂತ ನಿಕಾಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ನ್ಯಾಯಾಲಯದ ಆದೇಶಕ್ಕೆ ಒಳಪಡುವ ನಿಬಂಧನೆಯನ್ವಯ ನೇಮಕಾತಿ ಆದೇಶವನ್ನು ನೀಡಲು ಸಭೆ ಸೂಚಿಸಿತು.**

**ವಿಷಯ 4: ರಾಜ್ಯ ವೇತನಶ್ರೇಣಿಯ ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 11.11.2013ರಂದು ನಡೆದ ಪ್ರಶಾಸನ ಸಮಿತಿ ಹದಿನೇಳನೇ ಸಭೆಯ ನಿರ್ಣಯದಂತೆ ಅರ್ಹ ಅಭ್ಯರ್ಥಿಗಳ ಅಲಭ್ಯತೆಯಿಂದ ಖಾಲಿ ಉಳಿದಿದ್ದ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ (ಬ್ಯಾಕ್‌ಲಾಗ್) ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆಯನ್ನು (09.01.2014) ಹೊರಡಿಸಿ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ದಿನಾಂಕ: 31.08.2012ರಂದು ನಡೆದ ಪ್ರಶಾಸನ ಸಮಿತಿ ಆರನೇ ಸಭೆಯ ನಿರ್ಣಯದಂತೆ 'ಎ', 'ಬಿ' ಮತ್ತು 'ಸಿ' ವರ್ಗದ ಹುದ್ದೆಗಳಿಗೆ

ಒಟ್ಟು 25 ಅಂಕಗಳನ್ನು ಹಾಗೂ 'ಡಿ' ವರ್ಗದ ಹುದ್ದೆಗೆ 10 ಅಂಕಗಳನ್ನು ನಿರ್ದಿಷ್ಟೀಕರಿಸಿಕೊಂಡು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 2014ರ ಫೆಬ್ರವರಿ 13ರಂದು ಸಂದರ್ಶನವನ್ನು ನಡೆಸಲಾಯಿತು. ಈ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಈ ಹಿಂದಿನ ಪ್ರಶಾಸನ ಸಮಿತಿ 19ನೇ (ವಿಶೇಷ) ಸಭೆಯಲ್ಲಿ ವಿಷಯದ ಅನುಮೋದನೆಯನ್ನು ಮಾಡಬೇಕಾಗಿತ್ತು. ಆದರೆ, ಸರ್ಕಾರದ ಪತ್ರ ಸಂಖ್ಯೆ: ಇಡಿ 51 ಪ್ರಕಾ 2014; ದಿನಾಂಕ: 17.02.2014ರ ಪತ್ರದಲ್ಲಿ ಸೂಚಿಸಿರುವಂತೆ ಮುಂದಿನ ಪ್ರಶಾಸನ ಸಮಿತಿ ಸಭೆಯಲ್ಲಿ ಇಟ್ಟುಕೊಳ್ಳಲು ಪ್ರಧಾನ ಕಾರ್ಯದರ್ಶಿಗಳು ಸೂಚಿಸಿದ್ದರು. ಇಡಿ 34 ಯುಡಿವಿ 2013; ದಿನಾಂಕ: 31.05.2013ರ ಸುತ್ತೋಲೆಯಲ್ಲಿ ಕುಲಪತಿಗಳ ಅಧಿಕಾರಾವಧಿಯ ಕೊನೆಯ ಮೂರು ತಿಂಗಳ ಅವಧಿಯಲ್ಲಿ ಯಾವುದೇ ಪ್ರಮುಖ ನಿರ್ಣಯಗಳನ್ನು ತೆಗೆದುಕೊಳ್ಳಬಾರದೆಂದು ಸೂಚಿಸಿದ್ದು, ಮಾನ್ಯ ಕುಲಪತಿಗಳ ಅಧಿಕಾರಾವಧಿ 25 ಮೇ 2014ರ ತತ್ಪೂರ್ವದಲ್ಲಿಯೇ ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಸಂಪೂರ್ಣ ಮುಗಿದಿದ್ದು, ತಾಂತ್ರಿಕ ಕಾರಣಗಳಿಂದ ಮುಂದೂಡಲ್ಪಟ್ಟಿತ್ತು. ರಾಜ್ಯ ವೇತನಶ್ರೇಣಿಯ ಬೋಧಕ–ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸಲು ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ರಾಜ್ಯ ವೇತನಶ್ರೇಣಿಯ ಬೋಧಕ 'ಯೋಜನಾ ಸಹಾಯಕ (ಶೈಕ್ಷಣಿಕ)' ಮತ್ತು ರಾಜ್ಯ ವೇತನಶ್ರೇಣಿಯ ಬೋಧಕೇತರ 'ಉಪನಿರ್ದೇಶಕ' ಹುದ್ದೆಗಳಿಗೆ ದಿನಾಂಕ: 13 ಮಾರ್ಚ್ 2014ರಂದು ನಡೆದ 'ಆಯ್ಕೆ ಸಮಿತಿ' ಸಭೆಯ ಶಿಫಾರಸ್ಸುಗಳನ್ನು ಸಂಪೂರ್ಣವಾಗಿ ಸಭೆಯು ಪರಿಶೀಲಿಸಿತು. ಉಪನಿರ್ದೇಶಕ ಮತ್ತು ಯೋಜನಾ ಸಹಾಯಕ (ಶೈಕ್ಷಣಿಕ) ಹುದ್ದೆಗಳ ನೇಮಕಾತಿಗೆ ಈಗಾಗಲೇ ಮೂರು ಬಾರಿ ಅಧಿಸೂಚನೆ (ದಿನಾಂಕ: 16.07.2012, 10.01.2013 ಮತ್ತು 28.05.2013) ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದರೂ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಹಿನ್ನೆಲೆಯಲ್ಲಿ, ಈ ಬಾರಿ ಅರ್ಜಿ ಸಲ್ಲಿಸಿದ ಒಬ್ಬೊಬ್ಬ ಅಭ್ಯರ್ಥಿಗಳನ್ನೇ ಸಂದರ್ಶನಕ್ಕೆ ಆಹ್ವಾನಿಸಿರುವುದನ್ನು ಸಭೆಯು ಪರಿಶೀಲಿಸಿತು. ಆಯಾಯ ಹುದ್ದೆಗಳಿಗೆ ಬೇಕಾಗುವ ಸೇವಾ ಅನುಭವ, ಜ್ಯೇಷ್ಠತೆ ಮತ್ತು ಶೈಕ್ಷಣಿಕ ಅರ್ಹತೆಯನ್ನು ಕ್ರಮಾನುಸಾರವಾಗಿ ಪರಿಗಣಿಸಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು. ಸಹಾಯಕ ಕುಲಸಚಿವ, ಕಂಪ್ಯೂಟರ್ ಆಪರೇಟರ್ ಮತ್ತು ಟೆಲಿಫೋನ್ ಆಪರೇಟರ್ ಹುದ್ದೆಗಳಿಗೆ ಸೂಕ್ತ ಅಭ್ಯರ್ಥಿಗಳು ದೊರಕದಿರುವುದರಿಂದ ಮತ್ತೊಮ್ಮೆ ಅಧಿಸೂಚನೆಯನ್ನು ಹೊರಡಿಸಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಕ್ರಮಕೈಗೊಳ್ಳಬಹುದೆಂದು ಸಭೆ ಸೂಚಿಸಿತು. ನೇಮಕಾತಿ ಹೊಂದಿರುವವರು ನೇಮಕಾತಿ ಆದೇಶ ಹೊರಡಿಸಿದ ಒಂದು ವಾರದ ಒಳಗೆ ಕರ್ತವ್ಯಕ್ಕೆ ಹಾಜರಾಗಲು ಸಭೆಯು ಸೂಚಿಸಿತು.**

| ಕ್ರ.ಸಂ. | ಹುದ್ದೆಯ ಪದನಾಮ | ಆಯ್ಕೆಗೊಂಡ ಅಭ್ಯರ್ಥಿಗಳು | ಮೀಸಲಾತಿ |
|---|---|---|---|
| **01.** | ಉಪ ನಿರ್ದೇಶಕ | **ಶ್ರೀ ಸಂತೋಷ ಸುಭಾಸ ಹಾನಗಲ್ಲ**<br>C/o. ಶ್ರೀ ಟಿ. ಸೀನಪ್ಪ, ಮನೆ ನಂ. 135, 5ನೇ ಮುಖ್ಯರಸ್ತೆ<br>11ನೇ ಅಡ್ಡರಸ್ತೆ, ಪ್ರಶಾಂತನಗರ, ಬೆಂಗಳೂರು–560079 | ಪರಿಶಿಷ್ಟ ಜಾತಿ |
| **02.** | ಯೋಜನಾ ಸಹಾಯಕ (ಶೈಕ್ಷಣಿಕ) | **ಶ್ರೀ ನಾರಾಯಣಸ್ವಾಮಿ ಎಂ.ಎಸ್.**<br>ಸಾಹಿತ್ಯ ಸಹಾಯಕ, ಶ್ರೀ ಶ್ರೀಮಾತಾ ಸಂಸ್ಕೃತ ಕಾಲೇಜು<br>(ಕೋಟೆಮನೆ), ಉಮ್ಮಚಗಿ, ಯಲ್ಲಾಪುರ ತಾಲ್ಲೂಕು<br>ಉತ್ತರ ಕನ್ನಡ ಜಿಲ್ಲೆ | ಪರಿಶಿಷ್ಟ ಪಂಗಡ |

**ವಿಷಯ 5: ಪ್ರಸಾರಾಂಗ ಸಲಹಾ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ವಿಶ್ವವಿದ್ಯಾಲಯದ ಪ್ರಸಾರಾಂಗ ಸಲಹಾ ಸಮಿತಿ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 26.02.2014ರಂದು ನಡೆಯಿತು. ಈ ಸಭೆಯ ನಡಾವಳಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಪ್ರಸಾರಾಂಗ ಸಭೆಯ ನಡಾವಳಿಯನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 6: ವಿದ್ವಾನ್ ಕೆ.ಎಲ್. ರಾಘವ –ಇವರು ನೀಡಿರುವ ಪತ್ರದ ಬಗೆಗೆ.**

ಟಿಪ್ಪಣಿ: ದಿನಾಂಕ: 28.01.2014ರಂದು ನಡೆದ ಪ್ರಶಾಸನ ಸಮಿತಿ 18ನೇ ಸಭೆಯ ನಿರ್ಣಯದಂತೆ ವಿದ್ವಾನ್ ಕೆ.ಎಲ್. ರಾಘವ ಅವರನ್ನು ಕೆಲಸಕ್ಕೆ ಹಾಜರುಪಡಿಸಿಕೊಳ್ಳಲಾಗಿದ್ದು, ಪರಿವೀಕ್ಷಣಾ ಅವಧಿಯಲ್ಲಿ ಸದರಿ ಸಿಬ್ಬಂದಿಯ ಕಾರ್ಯಪ್ರಗತಿ ಮತ್ತು ನೈಪುಣ್ಯತೆ ತಿಳಿಯಲು ಸಾಧ್ಯವಾಗಿಲ್ಲದಿರುವ ಬಗೆಗೆ ಪತ್ರವೊಂದನ್ನು ನೀಡಬೇಕೆಂಬ ಸೂಚನೆಯಂತೆ ವಿದ್ವಾನ್ ಕೆ.ಎಲ್. ರಾಘವ ಅವರು ನೀಡಿರುವ ಪತ್ರವನ್ನು ಸಭೆಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಕೆ.ಎಲ್. ರಾಘವ ಅವರು ಸಲ್ಲಿಸಿದ್ದ ಪತ್ರದ ಸಂಪೂರ್ಣ ಒಕ್ಕಣೆಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರಾದ ಶ್ರೀ ಬಿ.ಎ. ರಾಜಶೇಖರ್ ಅವರು ಕೆ.ಸಿ.ಎಸ್.ಆರ್. ನಿಯಮಗಳನ್ವಯ ಅವಕಾಶವಿಲ್ಲವೆಂದು, ಅವರ ಪತ್ರದಲ್ಲಿ ತೋರಿಸಿರುವ ವಿವರಗಳು ಸಮರ್ಥನೀಯವಲ್ಲವೆಂದು ಅಭಿಪ್ರಾಯಪಟ್ಟರು. ಸಭೆಯ ಸದಸ್ಯರೆಲ್ಲರೂ ಅಭಿಪ್ರಾಯಿಸಿದ ಎಲ್ಲಾ ಅಂಶಗಳನ್ನು ಅಧ್ಯಕ್ಷರು ಪರಿಶೀಲಿಸಿದ ನಂತರ, ಈ ಸಂಬಂಧವಾಗಿ ಸರ್ಕಾರಕ್ಕೆ ಪತ್ರ ಬರೆದು ಮುಂದಿನ ಕ್ರಮ ವಹಿಸಲಾಗುವುದೆಂದು ಕುಲಪತಿಗಳು ಸಭೆಗೆ ತಿಳಿಸಿದರು.**

**ವಿಷಯ 7: 2014–15ನೇ ಸಾಲಿನಿಂದ ಏಕರೂಪದ ಸಾಮಾನ್ಯ ವೇಳಾಪಟ್ಟಿಯನ್ನು ಜಾರಿಗೆ ತರುವ ಬಗೆಗೆ.**

ಟಿಪ್ಪಣಿ: ರಾಜ್ಯದ ಉನ್ನತ ಶಿಕ್ಷಣದಲ್ಲಿರುವ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ವೇಳಾಪಟ್ಟಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಕುಲಪತಿಗಳ ಒಂದು ಸಮಿತಿಯನ್ನು ರಚಿಸಿ, ವೇಳಾಪಟ್ಟಿಯನ್ನು ಸಿದ್ಧಪಡಿಸಿದೆ. 2014–15ನೇ ಸಾಲಿನಿಂದ ಏಕರೂಪದ ಸಾಮಾನ್ಯ ವೇಳಾಪಟ್ಟಿಯನ್ನು ಅನುಷ್ಠಾನಗೊಳಿಸಲು ಸರ್ಕಾರವು ಈಗಾಗಲೇ ಆದೇಶವನ್ನು ಹೊರಡಿಸಿದೆ.(ಆದೇಶ ಸಂಖ್ಯೆ: ಇಡಿ 534 ಯುಆರ್‌ಸಿ 2013; ದಿನಾಂಕ: 06.01.2014) ಈ ಬಗೆಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಪತ್ರವೊಂದನ್ನು ಬರೆದು, ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಾಮಾನ್ಯ

ವೇಳಾಪಟ್ಟಿಯನ್ನು 2014–15ನೇ ಸಾಲಿನಿಂದ ಚಾಚೂ ತಪ್ಪದೆ ಅನುಷ್ಠಾನಗೊಳಿಸಬೇಕೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಮುಂದಿನ ಸೂಕ್ತ ಕ್ರಮವಹಿಸಲು ಸಭೆಯ ಅವಗಾಹನೆಗಾಗಿ ವಿಷಯವನ್ನು ಮಂಡಿಸಿದೆ.

ನಿರ್ಣಯ: **ಉನ್ನತ ಶಿಕ್ಷಣ ಇಲಾಖೆಯಿಂದ ಹೊರಡಿಸಿರುವ ಅನುಷ್ಠಾನವನ್ನು 2014–15ನೇ ಸಾಲಿನಲ್ಲಿ ಸೂಕ್ತ ರೀತಿಯಿಂದ ಕ್ರಮವಹಿಸಲು ಸಭೆ ಒಪ್ಪಿಗೆ ನೀಡಿತು. ಈ ಸಂಬಂಧವಾಗಿ ಅಧ್ಯಯನಾಂಗದ ನಿರ್ದೇಶಕರು ಕ್ರಮವಹಿಸಲು ಸಭೆ ಸೂಚಿಸಿತು.**

**ವಿಷಯ 8: ಎಂ.ಫಿಲ್–ವಿಶಿಷ್ಟಾಚಾರ್ಯ ತರಗತಿಗಳಿಗೆ ಸಹಾಯಕ ಪ್ರಾಧ್ಯಾಪಕರನ್ನು ಮಾರ್ಗದರ್ಶಕರಾಗಿ ನಿಯೋಜಿಸುವ ಕುರಿತು ಉಪಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗೆಗೆ.**

ಟಿಪ್ಪಣಿ: ದಿನಾಂಕ: 21.01.2014ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 10ನೇ ಸಭೆಯು ಎಂ.ಫಿಲ್–ವಿಶಿಷ್ಟಾಚಾರ್ಯ ತರಗತಿಗಳಿಗೆ ವಿಶ್ವವಿದ್ಯಾಲಯದ ಅರ್ಹ ಸಹಾಯಕ ಪ್ರಾಧ್ಯಾಪಕರನ್ನು ಮಾರ್ಗದರ್ಶಕರನ್ನಾಗಿ ನಿಯೋಜಿಸಲು ವರದಿಯೊಂದನ್ನು ನೀಡುವಂತೆ ಸೂಚಿಸಿ ಒಂದು ಉಪಸಮಿತಿಯನ್ನು ರಚಿಸಿತ್ತು. ಈ ಉಪಸಮಿತಿಯು ದಿನಾಂಕ: 19.02.2014ರಂದು ಸಭೆಯನ್ನು ನಡೆಸಿ ತನ್ನ ಶಿಫಾರಸ್ಸುಗಳನ್ನು ಸಲ್ಲಿಸಿದ್ದು, ಈ ಉಪಸಮಿತಿಯ ಶಿಫಾರಸ್ಸುಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ದಿನಾಂಕ: 19.02.2014ರಂದು ನಡೆದ ಉಪಸಮಿತಿಯ ಶಿಫಾರಸ್ಸುಗಳನ್ನು ಪರಿಶೀಲಿಸಿದ ಸಭೆಯು ಪಿಎಚ್.ಡಿ. ಮಾಡಿರುವ ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರು ಎಂ.ಫಿಲ್–ವಿಶಿಷ್ಟಾಚಾರ್ಯ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಲು ಒಪ್ಪಿಗೆಯನ್ನು ನೀಡಿತು.**

1. **ಡಾ. ವಿನಾಯಕ ನಾಮಣ್ಣವರ,** ಸಹಾಯಕ ಪ್ರಾಧ್ಯಾಪಕರು, ಭಾಷಾನಿಕಾಯ
2. **ಡಾ. ಕೃಷ್ಣ ಜೋಶಿ,** ಸಹಾಯಕ ಪ್ರಾಧ್ಯಾಪಕರು, ಭಾಷಾನಿಕಾಯ
3. **ಡಾ. ರೇಖಾದೇವಿ ಎಸ್.ಎಚ್.,** ಸಹಾಯಕ ಪ್ರಾಧ್ಯಾಪಕರು, ಭಾಷಾನಿಕಾಯ
4. **ಡಾ. ವಿನಯ್ ಪಿ.,** ಸಹಾಯಕ ಪ್ರಾಧ್ಯಾಪಕರು, ವೇದಾಂತನಿಕಾಯ
5. **ಡಾ. ಶರತ್‌ಚಂದ್ರ ಸ್ವಾಮಿ,** ಸಹಾಯಕ ಪ್ರಾಧ್ಯಾಪಕರು, ವೇದಾಂತನಿಕಾಯ
6. **ಡಾ. ಮಂಜುನಾಥ ಭಟ್ಟ,** ಸಹಾಯಕ ಪ್ರಾಧ್ಯಾಪಕರು, ಶಾಸ್ತ್ರನಿಕಾಯ

**ವಿಷಯ 9: ಪ್ರೊ. ಶ್ರೀನಿವಾಸ ವರಖೇಡಿ, ಡೀನ್, ಶಾಸ್ತ್ರನಿಕಾಯ –ಇವರಿಗೆ ಕುಲಸಚಿವರು ನೀಡಿರುವ ಶೋಕಾಸ್ ಪತ್ರದ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಶಾಸ್ತ್ರನಿಕಾಯದ ಪ್ರಾಧ್ಯಾಪಕ ಹುದ್ದೆಗೆ ನಿಯೋಜನೆಗೊಂಡು, ಈ ನಿಕಾಯದ ಡೀನರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ಶ್ರೀನಿವಾಸ ವರಖೇಡಿ –ಇವರಿಗೆ ಕುಲಸಚಿವರು ದಿನಾಂಕ: 19.02.2014ರಂದು ಶೋಕಾಸ್ ನೋಟಿಸ್‌ಅನ್ನು ನೀಡಿದ್ದು, ಈ ನೋಟಿಸ್‌ನಲ್ಲಿ ಡೀನರ ಕಾರ್ಯಭಾರ ಹಾಗೂ ಇನ್ನಿತರ ಬೋಧಕವರ್ಗದ ಕಾರ್ಯಭಾರದ ಬಗೆಗೆ ಮತ್ತು ವಿಶ್ವವಿದ್ಯಾಲಯದ ನಿಯಮಕ್ಕೆ ವಿರುದ್ಧವಾಗಿ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಿದ್ದೇಕೆ? ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ 3, ಪರಿಚ್ಛೇದ 13ರ ಪ್ರಕಾರ ಕುಲಪತಿಗಳು ವಿಶ್ವವಿದ್ಯಾಲಯದ ಶೈಕ್ಷಣಿಕ ಮುಖ್ಯಸ್ಥರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಆಯಾ ನಿಕಾಯಗಳಲ್ಲಿ ನಿಯುಕ್ತರಾದ ಎಲ್ಲ ಬೋಧಕ ವರ್ಗದ ಕಾರ್ಯಭಾರಗಳ ಬಗೆಗೆ ಕುಲಪತಿಗಳಿಗೆ ವರದಿಯನ್ನು ಸಲ್ಲಿಸಲಾಗುತ್ತಿದೆ. ಇದಲ್ಲದೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ 3, ಪರಿಚ್ಛೇದ 16ರ (2)(ಎ) ಅಂಶದಲ್ಲಿ ಕುಲಸಚಿವರು ವಿಶ್ವವಿದ್ಯಾಲಯದ ಬೋಧಕ ಹಾಗೂ ಶೈಕ್ಷಣಿಕ ಸಿಬ್ಬಂದಿಯ ಹೊರತಾಗಿ ಇತರ ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಅಧಿಕಾರ ಹೊಂದಿರುತ್ತಾರೆ ಎಂದು ಸ್ಪಷ್ಟವಾಗಿ ಉಲ್ಲಿಖಿತವಾಗಿದೆ. ಹೀಗಾಗಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಡೀನ್–ಇವರಿಗೆ ಯಾವುದೇ ನೋಟಿಸ್ ನೀಡುವ ಮುನ್ನ ಪ್ರಶಾಸನ ಸಮಿತಿಯ ಅಥವಾ ಕುಲಪತಿಗಳ ಒಪ್ಪಿಗೆಯನ್ನು ಪಡೆಯಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಶಾಸ್ತ್ರನಿಕಾಯದ ಡೀನರಾದ ಪ್ರೊ. ಶ್ರೀನಿವಾಸ ವರಖೇಡಿ ಅವರು ಮಾನ್ಯ ಕುಲಪತಿಗಳಿಗೆ ಪತ್ರ ಬರೆದು, ಕುಲಸಚಿವರ ಆಹ್ವಾನದ ಮೇರೆಗೆ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಿದ್ದೇವೆಯೇ ಹೊರತು ವೈಯಕ್ತಿಕ ಇಚ್ಛೆಯಿಂದಲ್ಲ ಎಂಬ ಅಂಶವನ್ನು ತಿಳಿಸಿರುತ್ತಾರೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಕುಲಸಚಿವರು ಹೊರಡಿಸಿರುವ ಶೋಕಾಸ್ ನೋಟೀಸನ್ನು ನಿಯಮಾನುಸಾರ ಮಾನ್ಯ ಕುಲಪತಿಗಳ ಗಮನಕ್ಕೆ ತಾರದೆ, ಸ್ವೇಚ್ಛಾನುಸಾರವಾಗಿ ವರ್ತಿಸಿ ನೋಟಿಸ್ ಹೊರಡಿಸಿರುವುದರ ಬಗೆಗೆ ಅಸಮಾಧಾನವನ್ನು ವ್ಯಕ್ತಪಡಿಸಿತು. ಶಾಸ್ತ್ರನಿಕಾಯದ ಡೀನ್ ಪ್ರೊ. ಶ್ರೀನಿವಾಸ ವರಖೇಡಿ ಅವರಿಗೆ ಕುಲಸಚಿವರು ನೀಡಿದ್ದ ಶೋಕಾಸ್ ನೋಟೀಸನ್ನು ಸಭೆಯು ರದ್ದುಗೊಳಿಸಿತು.**

**ವಿಷಯ 10: ಪ್ರೊ. ವಿ. ಗಿರೀಶ್‌ಚಂದ್ರ, ಡೀನ್, ಭಾಷಾನಿಕಾಯ –ಇವರಿಗೆ ಕುಲಸಚಿವರು ನೀಡಿರುವ ಶೋಕಾಸ್ ಪತ್ರದ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಭಾಷಾನಿಕಾಯದ ಪ್ರಾಧ್ಯಾಪಕ ಹುದ್ದೆಗೆ ನಿಯೋಜನೆಗೊಂಡು, ಈ ನಿಕಾಯದ ಡೀನರಾಗಿ ಕಾರ್ಯನಿರ್ವಹಿಸುತ್ತಿರುವ ಪ್ರೊ. ವಿ. ಗಿರೀಶ್‌ಚಂದ್ರ –ಇವರಿಗೆ ಕುಲಸಚಿವರು ದಿನಾಂಕ: 19.02.2014ರಂದು ಶೋಕಾಸ್ ನೋಟಿಸ್‌ಅನ್ನು ನೀಡಿದ್ದು, ಈ ನೋಟಿಸ್‌ನಲ್ಲಿ ಡೀನರ ಕಾರ್ಯಭಾರ ಹಾಗೂ ಇನ್ನಿತರ ಬೋಧಕವರ್ಗದ ಕಾರ್ಯಭಾರದ ಬಗೆಗೆ ಮತ್ತು ವಿಶ್ವವಿದ್ಯಾಲಯದ ನಿಯಮಕ್ಕೆ ವಿರುದ್ಧವಾಗಿ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಿದ್ದೇಕೆ? ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ 3, ಪರಿಚ್ಛೇದ 13ರ ಪ್ರಕಾರ ಕುಲಪತಿಗಳು ವಿಶ್ವವಿದ್ಯಾಲಯದ ಶೈಕ್ಷಣಿಕ ಮುಖ್ಯಸ್ಥರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯದ ಆಯಾ ನಿಕಾಯಗಳಲ್ಲಿ ನಿಯುಕ್ತರಾದ ಎಲ್ಲ ಬೋಧಕ ವರ್ಗದ ಕಾರ್ಯಭಾರಗಳ ಬಗೆಗೆ ಕುಲಪತಿಗಳಿಗೆ ವರದಿಯನ್ನು ಸಲ್ಲಿಸಲಾಗುತ್ತಿದೆ. ಇದಲ್ಲದೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ ಅಧ್ಯಾಯ 3, ಪರಿಚ್ಛೇದ 16ರ (2)(ಎ) ಅಂಶದಲ್ಲಿ ಕುಲಸಚಿವರು ವಿಶ್ವವಿದ್ಯಾಲಯದ ಬೋಧಕ ಹಾಗೂ ಶೈಕ್ಷಣಿಕ ಸಿಬ್ಬಂದಿಯ ಹೊರತಾಗಿ

ಇತರ ನೌಕರರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ಅಧಿಕಾರ ಹೊಂದಿರುತ್ತಾರೆ ಎಂದು ಸ್ಪಷ್ಟವಾಗಿ ಉಲ್ಲಿಖಿತವಾಗಿದೆ. ಹೀಗಾಗಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ಡೀನ್-ಇವರಿಗೆ ಯಾವುದೇ ನೋಟಿಸ್ ನೀಡುವ ಮುನ್ನ ಪ್ರಶಾಸನ ಸಮಿತಿಯ ಅಥವಾ ಕುಲಪತಿಗಳ ಒಪ್ಪಿಗೆಯನ್ನು ಪಡೆಯಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಭಾಷಾನಿಕಾಯದ ಡೀನರಾದ ಪ್ರೊ. ವಿ. ಗಿರೀಶ್‌ಚಂದ್ರ ಅವರು ಮಾನ್ಯ ಕುಲಪತಿಗಳಿಗೆ ಪತ್ರ ಬರೆದು, ಕುಲಸಚಿವರ ಆಹ್ವಾನದ ಮೇರೆಗೆ ಸಿಂಡಿಕೇಟ್ ಸಭೆಗಳಲ್ಲಿ ಭಾಗವಹಿಸಿದ್ದೇವೆಯೇ ಹೊರತು ವೈಯಕ್ತಿಕ ಇಚ್ಛೆಯಿಂದಲ್ಲ ಎಂಬ ಅಂಶವನ್ನು ತಿಳಿಸಿರುತ್ತಾರೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಕುಲಸಚಿವರು ಹೊರಡಿಸಿರುವ ಶೋಕಾಸ್ ನೋಟೀಸನ್ನು ನಿಯಮಾನುಸಾರ ಮಾನ್ಯ ಕುಲಪತಿಗಳ ಗಮನಕ್ಕೆ ತಾರದೆ, ಸ್ವೇಚ್ಛಾನುಸಾರವಾಗಿ ವರ್ತಿಸಿ ನೋಟಿಸ್ ಹೊರಡಿಸಿರುವುದರ ಬಗೆಗೆ ಅಸಮಾಧಾನವನ್ನು ವ್ಯಕ್ತಪಡಿಸಿತು. ಭಾಷಾನಿಕಾಯದ ಡೀನ್ ಪ್ರೊ. ವಿ. ಗಿರೀಶ್‌ಚಂದ್ರ ಅವರಿಗೆ ಕುಲಸಚಿವರು ನೀಡಿದ್ದ ಶೋಕಾಸ್ ನೋಟೀಸನ್ನು ಸಭೆಯು ರದ್ದುಗೊಳಿಸಿತು.**

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:

**ವಿಷಯ 1: ಯುಜಿಸಿ ವೇತನಶ್ರೇಣಿಯ ಸಹಪ್ರಾಧ್ಯಾಪಕ ಮತ್ತು ರಾಜ್ಯ ವೇತನಶ್ರೇಣಿಯ ಬೋಧಕ-ಬೋಧಕೇತರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಲು ಉಪಕುಲಸಚಿವರನ್ನು ಪ್ರತ್ಯಾಯೋಜಿಸಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: ಯುಜಿಸಿ ವೇತನಶ್ರೇಣಿಯ ಸಹಪ್ರಾಧ್ಯಾಪಕ ಮತ್ತು ರಾಜ್ಯ ವೇತನಶ್ರೇಣಿಯ ಬೋಧಕ-ಬೋಧಕೇತರ ಹುದ್ದೆಗಳ ಸಂದರ್ಶನಕ್ಕೆ ಸಂಬಂಧಿಸಿದ ಎಲ್ಲ ಬಗೆಯ ಪತ್ರವ್ಯವಹಾರ ಮತ್ತು ಇತರೆ ಪೂರಕ ಪ್ರಕ್ರಿಯೆಗಳನ್ನು ನಡೆಸಲು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ 17(4)(ಅ) ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009ರ 16(1)ರಲ್ಲಿ ಪ್ರದತ್ತವಾಗಿರುವ ಕುಲಪತಿಗಳ ವಿವೇಚನಾಧಿಕಾರದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಉಪಕುಲಸಚಿವರಾದ ವಿದ್ವಾನ್ ಪಿ.ಆರ್. ಪಾಗೋಜಿ ಅವರನ್ನು ಪ್ರತ್ಯಾಯೋಜಿಸಲಾಗಿತ್ತು. ಇವರನ್ನು ಪ್ರತ್ಯಾಯೋಜಿಸಿರುವುದನ್ನು ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

ನಿರ್ಣಯ: **ಸಭೆಯು 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000' ಮತ್ತು 'ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009'ಗಳಲ್ಲಿ ಪ್ರಸ್ತಾಪಿತಗೊಂಡಿರುವ ಅಂಶಗಳನ್ವಯ ಪ್ರಶಾಸನ ಸಮಿತಿ 19ನೇ (ವಿಶೇಷ) ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ವಿಷಯ ಸಂಖ್ಯೆ 1ರಲ್ಲಿ ನಿರ್ಣಯಿಸಿದಂತೆ ದಿನಾಂಕ: 03.03.2014ರಂದು ನಡೆಯುತ್ತಿರುವ ಪ್ರಶಾಸನ ಸಮಿತಿ 20ನೇ ಸಭೆಯ ಪ್ರತ್ಯಾಯೋಜಿತ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕ್ರಮವಹಿಸಲು ಸಭೆಯು ತನ್ನ ಒಪ್ಪಿಗೆ ನೀಡಿತು.**

**ವಿಷಯ 2: ಕುಲಸಚಿವರ ಕಾರ್ಯನಿರ್ವಹಣಾ ಸ್ವರೂಪ, ಕಾರ್ಯಾಲಯದ ಕೆಲಸ-ಕಾರ್ಯಗಳ ಹಿನ್ನಡೆ ಹಾಗೂ ಆಡಳಿತಾತ್ಮಕ ಅಸಮರ್ಪಕ ನಿರ್ವಹಣೆಯ ಬಗೆಗೆ.**

ಟಿಪ್ಪಣಿ: ಪ್ರಶಾಸನ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರಾದ ಶ್ರೀ ಬಿ.ಎ. ರಾಜಶೇಖರ್ ಅವರು ವಿಶ್ವವಿದ್ಯಾಲಯದ ಕಾರ್ಯಪ್ರಗತಿಗೆ ಮತ್ತು ಅಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕುಲಸಚಿವ ಪ್ರೊ. ಪಿ.ಬಿ. ಸಂತಪ್ಪನವರ ಕಾರ್ಯಸ್ವರೂಪದ ಬಗೆಗೆ ಅಸಮಾಧಾನವನ್ನು ವ್ಯಕ್ತಪಡಿಸಿದರು. ಕೂಡಲೇ ಸರ್ಕಾರಕ್ಕೆ ಪತ್ರ ಬರೆಯಲು ಮತ್ತು ಇಂಥ ಕುಲಸಚಿವರಿಂದ ವಿಶ್ವವಿದ್ಯಾಲಯದ ಗೌರವ ಕೆಡಲು ಕಾರಣವಾಗುತ್ತದೆಂದು ಸಭೆಗೆ ತಿಳಿಸಿದರು.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಚರ್ಚಿಸಿತು. ಕುಲಸಚಿವರ ಕಾರ್ಯಸ್ವರೂಪ ವಿಶ್ವವಿದ್ಯಾಲಯದ ಕಾರ್ಯಪ್ರಗತಿಗೆ ಅಡ್ಡಿಯಾಗುತ್ತಿರುವುದನ್ನು ಸಭೆಯು ಖಂಡಿಸಿತು. ಈ ಸಂಬಂಧವಾಗಿ ಸರ್ಕಾರಕ್ಕೆ ತೀವ್ರವಾಗಿ ಮತ್ತೊಂದು ಜ್ಞಾಪನಪತ್ರವನ್ನು ವಿವರಗಳ ಸಹಿತ ಕಳುಹಿಸಲು ಸಭೆಯು ಸೂಚಿಸಿತು.**

**ವಿದ್ವಾನ್ ಪಿ.ಆರ್. ಪಾಗೋಜಿ**
ಉಪಕುಲಸಚಿವರು

ಮಾನ್ಯ ಕುಲಪತಿಗಳಿಂದ ನಡಾವಳಿಯ ಕರಡುಪ್ರತಿ ಅನುಮೋದನೆಗೊಂಡಿದೆ.